# ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ.

## ಪ್ರಕರಣ ಸಂಖ್ಯೆಃ 117/2026

**ದಿನಾಂಕಃ 07.04.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

| ಸಿಡಬ್ಲ್ಯೂಃ | 15 | ಪಿಡಬ್ಲ್ಯೂಃ | 13 |
|---|---|---|---|
| ಹೆಸರು | ಭೀಶ್ಮಣ್ಣ | | |
| ತಂದೆ / ಗಂಡನ ಹೆಸರು | ಕೃಷ್ಣಪ್ಪ | | |
| ವಯಸ್ಸು | 48 | | |
| ಉದ್ಯೋಗ | ಕೂಲಿ | | |
| ವಾಸ | ಉಜ್ಜಿನಕುಂಟೆ | | |

## ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ

ಚಾಸಾ 13 ಪರಿಚಯ. ಆರೋಪಿ ಗೊತ್ತಿಲ್ಲ.

2. ಸಾಕ್ಷಿಯು ನಿಪಿ.7 ರ ಅಮಾನತ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ.7(ಸಿ) ಎಂದು ಗುರುತಿಸಲಾಯಿತು. ನಿಪಿ.7 ರ ಪಂಚನಾಮೆಗೆ 2 ½ ವರ್ಷದ ಹಿಂದೆ ಉಜ್ಜಿನಕುಂಟೆ ರಾಷ್ಟ್ರಿಯ ಹೆದ್ದಾರಿಯಲ್ಲಿ ಹೋಗುತ್ತಿರುವಾಗ ಪೊಲೀಸರ ಕೋರಿಕೆಯಂತೆ ಸಹಿ ಮಾಡಿರುತ್ತೇನೆ. ನಿಪಿ.7 ರ ಪಂಚನಾಮೆಯಲ್ಲಿರುವ ಅಂಶಗಳು ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

## ಪಾಟೀ ಸವಾಲುಃ ಎ ಪಿ ಪಿ ರವರಿಂದಃ

ದಿಃ 21-10-2023 ರಂದು ಬೆಳಗ್ಗೆ 9.30 ಗಂಟೆ ಸಮಯದಲ್ಲಿ ತವಾರೆಕೆರೆಯ ಉಜ್ಜಿನಕುಂಟೆ ಹತ್ತಿರದಲ್ಲಿ ಪೊಲೀಸರು ನನ್ನ ಮತ್ತು ಚಾಸಾ 13 ರವರ ಸಮಕ್ಷಮ ಪೊಲೀಸರು ಬೆಳಗ್ಗೆ 9.30 ಗಂಟೆಯಿಂದ 10.30 ಗಂಟೆ ವರೆಗೆ ಅಪಘಾತದ ವಿಚಾರವಾಗಿ ಪಂಚನಾಮೆ ಪಡಿಸಿಕೊಂಡಿರುತ್ತಾರೆ

ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ 13 ರವರು ನಿಪಿ-7 ರನ್ನು ಓದಿ ತಿಳಿದು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಪಿ.ಎಸ್. ವಕೀಲರಿಂದಃ**

ಆರೋಪಿಯನ್ನು ನ್ಯಾಯಾಲಯದಲ್ಲಿ ಮೊದಲನೇ ಬಾರಿಗೆ ನೋಡುತ್ತಿರುತ್ತೇನೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಪರ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.